

ಪ್ರಕೃತಿಯ ಕೈಗೊಂಬೆ' ಎಂದು ಉತ್ತರಿಸಬಹುದು. ಹೀಗೆ ನಾವೂ ಕೂಡ ವಿಧಿಯ ಪರಿಸ್ಥಿತಿಯಲ್ಲಿ ನಮ್ಮ ಆಶಯಗಳ ಕೈಗೊಂಬೆಗಳಾಗಿ, 'ನಮ್ಮದು' ಎನ್ನುವುದೆಲ್ಲವನ್ನೂ ತೊರೆದು ನಮ್ಮದಲ್ಲದ ನಾಡಿನಲ್ಲಿ ನಮ್ಮದು ಎಂಬಂತೆ ಕಾಣುವ ತೋರ್ಪಡಿಕೆಯ, ಭದ್ರ ಅಡಿಪಾಯವಿಲ್ಲದ ಬರೀ ನೆನಪುಗಳ ಗೋಡೆಗಳಿರುವ ಗೂಡುಗಳಲಿ ರೇಡಿಯೋದಲ್ಲಿನ ಸುಪ್ರಭಾತ, ಟಿ.ವಿಯ ಬೆಳಗ್ಗೆ ತಲುಪುವ ಹಳಸಿದ ಧಾರವಾಹಿಗಳಲ್ಲಿ, ಆಗಾಗ ನಡೆಯುವ ಶಾಸ್ತ್ರೀಯ ಸಂಗೀತ, ಭರತನಾಟ್ಯ ಕಾರ್ಯಕ್ರಮಗಳಲ್ಲಿ ಜೀವಿಸುತ್ತ, ಭಾರತವನ್ನು ನೆನೆಯುತ್ತಾ ಇಲ್ಲೊಂದು ಕೃತಕ ಭಾರತವನ್ನು ರಚಿಸಿ ನಮ್ಮ ನಾಡಿಗೆ ಹೋಗಲೂ ಆಗದೇ, ಈ ನಾಡಿನವರಾಗಿ ಬದಕಲೂ ಆಗದೇ ನಮ್ಮ ನಿರ್ಧಾರಗಳನ್ನು ಸ್ಪಷ್ಟೀಕರಿಸಿಕೊಳ್ಳುತ್ತಾ ದಿನಗಳನ್ನು ನೂಕುತ್ತಿದ್ದೇವೆ.

ಕಷ್ಟಪಟ್ಟು ಬೆಳೆಸಿದ್ದ ತುಳಸಿಗೆ ಮುಂಜಾನೆಯೇ ನೀರು ಹಾಕಿ ಪೂಜೆ ಸಲ್ಲಿಸುತ್ತಿದ್ದಾಗ ಇಂದೇಕೊ ನೆನಪುಗಳ ಧಾರೆಯನ್ನೇ ತುಳಸಿಯ ಮಡಿಲಿಗೆ ಸುರಿಯುತ್ತಿದ್ದೇನೆನಿಸಿತ್ತು. ಅಮೆರಿಕದ ದೊಡ್ಡ ಕಂಪನಿಯೊಂದರ Vice President ಆಗಿ ಯಶಸ್ವಿನ ಏಣಿಯನ್ನೇರುವುದರಲ್ಲಿ ಹೊರದೇಶದವರೊನೆ ಪೈಪೋಟಿ ಮಾಡುವುದರಲ್ಲಿ ತನ್ಮಯನಾಗಿರುವ ಪತಿ, ಇಲ್ಲಿಯವರಂತೆಯೇ ಮಾತನಾಡುತ್ತಾ ಇಲ್ಲಿಯವರ ಸಂಸ್ಕೃತಿಯ ಮೈಗೂಡಿಸಿಕೊಂಡು ಬೆಳೆದು ನಿಂತಿರುವ ಮಗಳು, ಇವರ್ಯಾರಿಗೂ ನನ್ನ ಮನಸ್ಸಿನ ಗೊಂದಲ ಅರ್ಥವಾಗಲಾರದು. ಒಮ್ಮೊಮ್ಮೆ 'ಇವಳೇ ನನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗಳೇ, ಇವರೇ ನನಗೆ ತಾಳಿ ಕಟ್ಟಿ ನನ್ನನ್ನು ಇಲ್ಲಿಗೆ ಕರೆತಂದ ನನ್ನ ಪತಿಯೇ..?' ಎಂದು ಅನುಮಾನಿಸುವಷ್ಟು ಬದಲಾಗಿದ್ದಾರೆ. ಇಬ್ಬರೂ ತಮ್ಮ